


ಹುಟ್ಟು, ಸಾವು ಒಟ್ಟು ಒಟ್ಟು

FOREWORD

For stage two of our programme of teaching reading and writing to adults, we have provided two experimental primers and two Work-books. To accompany these materials, we have also produced three supplementary Readers.

The purpose of these supplementary books is to develop independence in reading by presenting in different contexts, the words which were learnt in primers I and II. They also serve a second purpose of arousing interest in further reading.

Although these books contain mostly the same words which were used in Primers I and II, they also introduce some 100 new words. It is, however, expected that the learners will be able to read most of these indepently by applying the skill of word recognition which they have already acquired.

The supplementary books are intended for use by the students after they have finished both the Primers.

We are again greatly indebted to Mr. K.S. Karanth, Mr. N. Bhadriah and Mr. K.K. Hebbar, who have already assisted us in writing and illustrating the Prmers,. for the further valuable help they have given us in producing these books.

We have printed only 300 copies of these books for experimental purpose, with the intention that they should be revised when they have been tried out in a number of adult literacy classes. Meanwhile we would welcome criticism and advice from all who may have the opportunity to examine them.

UNESCO GROUP TRAINING SCHEME

July 1954, Yelwal Bungalow, Mysore,

ಎರಡು ಮಾತು

ವಯಸ್ಕರ ಶಿಕ್ಷಣ ಕಾರ್ಯಕ್ರಮದಲ್ಲಿ ಹಲವು ಪ್ರಯೋಜನಗಳಾಗಿವೆ. ಈಗಲೂ ಹಲವು ವಿಧದ ಪ್ರಯೋಗಗಳು ನಡೆಯುತ್ತಿವೆ.. ಪರಿಣಾಮವಾಗಿ ಆ ಕ್ಷೇತ್ರದಲ್ಲಿ ಈಗ ತೀವ್ರತರ ಬೆಳವಣಿಗೆಗಳು ಕಂಡು ಬಂದಿವೆ. ವಯಸ್ಕರು ಬರಿಯ ಅಕ್ಷರ ಕಲಿತರೆ ಸಾಲದು, ಕಲಿತ ಅಕ್ಷರಗಳನ್ನು ಕ್ರಿಯಾತ್ಮಕವಾಗಿ ಬಳಸಿಕೊಂಡು, ಹೆಚ್ಚು ಹೆಚ್ಚು ಅರಿವನ್ನು ಪಡೆಯುವಂತಾಗಬೇಕು ಎಂಬ ಅಂಶವನ್ನು ವಯಸ್ಕರ ಶಿಕ್ಷಣ ತಜ್ಞರು ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. ಈ ನಿಟ್ಟಿನಲ್ಲಿ ಅಕ್ಷರ ಜ್ಞಾನವು ನವಸಾಕ್ಷರರಲ್ಲಿ ಸ್ಥಿರವಾಗಿ ಉಳಿಯಲು ಸಹಾಯ ಮಾಡುವಂಥ ಸ್ಥಿರೀಕರಣ ಸಾಹಿತ್ಯದ ನಿರ್ಮಿತಿ ಹೆಚ್ಚು ಹೆಚ್ಚು ನಡೆಯಬೇಕಾಗಿದೆ. ಅಂಥ ಸಾಹಿತ್ಯ ನಿರ್ಮಿತಿಯು ನಮ್ಮ ತಕ್ಷಣದ ಮಹತ್ವದ ಜವಾಬ್ದಾರಿಯೂ ಆಗಿದೆ.

ಆದರೆ, ಇಂಥ ಸ್ಥಿರೀಕರಣ ಸಾಹಿತ್ಯದ ನಿರ್ಮಿತಿಯು ಸುಲಭದ ಕೆಲಸವೇನೂ ಅಲ್ಲ. ಅಕ್ಷರಸ್ಥ ಬರಹಗಾರರಿಗೆ ಇದೊಂದು ಸವಾಲು. ಈ ಬಗ್ಗೆ 1954ರಷ್ಟು ಹಿಂದೆಯೇ ಯುನಸ್ಕೋದ ತರಬೇತಿ ಯೋಜನಾಧಿಕಾರಿಗಳು ಮೈಸೂರಿನಲ್ಲಿ ಒಂದು ತರಬೇತಿ ಶಿಬಿರವನ್ನು ನಡೆಸಿದ್ದರು. ಕ್ಷೇತ್ರಕಾರ್ಯ ಮಾಡಿ ಸಲ್ಲಿಸಲಾದ ವರದಿಗಳ ಆಧಾರದಿಂದ ಅಲ್ಲಿ ನವಸಾಕ್ಷರರಿಗಾಗಿ ಸಾಹಿತ್ಯ ನಿರ್ಮಾಣ ಮಾಡುವ ಬಗ್ಗೆ ಒಂದು ಚೌಕಟ್ಟನ್ನು ರೂಪಿಸಲಾಯಿತು. ಆ ಚೌಕಟ್ಟಿನಲ್ಲಿ ನಾಡಿನ ಸುಪ್ರಸಿದ್ಧ ಸಾಹಿತಿಗಳೂ ಶಿಕ್ಷಣ ತಜ್ಞರೂ ಆದ ಡಾ. ಕೆ. ಶಿವರಾಮ ಕಾರಂತರು ಈ ಕೃತಿಯನ್ನು ರಚಿಸಿಕೊಟ್ಟರು. ಜಗತ್ಪ್ರಸಿದ್ಧ ಕಲಾವಿದರಾದ ಶ್ರೀ. ಕೆ. ಕೆ. ಹೆಬ್ಬಾರರು ಕೃತಿಗೆ ಚಿತ್ರಗಳನ್ನು ಬರೆದುಕೊಟ್ಟರು. ಈ ಇಬ್ಬರೂ ಮಹನೀಯರೂ ದಕ್ಷಿಣ ಕನ್ನಡ ಜಿಲ್ಲೆಯವರಾಗಿರುವುದು ನಮ್ಮ ಹೆಮ್ಮೆಗೆ ಕಾರಣವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ಸಂಪೂರ್ಣ ಸಾಕ್ಷರತಾ ಆಂದೋಲನದ ಪರಿಣಾಮವಾಗಿ ಹೊರ ಬರುವ ನವಸಾಕ್ಷರರಿಗಾಗಿ ಈ ಕೃತಿಯನ್ನು ಈಗ ಪುನರ್ಮುದ್ರಿಸಿ ಕೊಡುತ್ತಿದ್ದೇವೆ. (ಪ್ರಥಮ ಮುದ್ರಣ 1954) ಇದಕ್ಕೆ ಒಪ್ಪಿಗೆ ನೀಡಿದ ಲೇಖಕರಿಗೆ ನಾವು ಕೃತಜ್ಞರಾಗಿದ್ದೇವೆ.

ಡಾ. ಶಿವರಾಮ ಕಾರಂತ, ಕೆ. ಕೆ. ಹೆಬ್ಬಾರರಂಥ ನಾಡಿನ ಧೀಮಂತರು ರಚಿಸಿಕೊಟ್ಟ ಈ ಕೃತಿಯ ಪೂರ್ಣ ಲಾಭವನ್ನು ನವಸಾಕ್ಷರರು ಪಡೆಯುತ್ತಾರೆಂದು ಭಾವಿಸಲಾಗಿದೆ.

1 ಡಿಸೆಂಬರ್ 1990

ಬಿ. ಸಂಕಪ್ಪ ರೈ
ಅಧ್ಯಕ್ಷರು
ದಕ್ಷಿಣ ಕನ್ನಡ ಜಿಲ್ಲಾ ಪರಿಷತ್
ಮಂಗಳೂರು

ಇನ್ನೊಮ್ಮೆ ಪ್ರಸಾರಕ್ಕೆ

ಬಲು ಹಿಂದೆ 1954ರ ಸುಮಾರಿಗೆ ಯುನೆಸ್ಕೊ ಸಂಸ್ಥೆಯವರು ಮೈಸೂರಿನ ಮಳವಾಲದಲ್ಲಿ ನಡೆಯಿಸಿದ ಸಾಮೂಹಿಕ ಮೂಲಭೂತ ಶಿಕ್ಷಣ ಸಂಶೋಧಕರ ಸಲುವಾಗಿ ನಾನು "ಜೋಗಿ ಕಂಡ ಊರು", "ದೇವ ಒಲಿದ ಊರು", "ಅಳಿಲ ಭಕ್ತಿ ಮಳಲ ಸೇವೆ", "ಹುಟ್ಟು ಸಾವು ಒಟ್ಟು" -ಎಂಬ ನಾಲ್ಕು ಬರಹಗಳನ್ನು ವಯಸ್ಕರಿಗೆ ಪ್ರಿಯವಾಗಲೆಂದು ಬರೆದು ಕೊಟ್ಟು, ಅದಕ್ಕೆ ಮಿತ್ರರಾದ ಕೆ. ಕೆ. ಹೆಬ್ಬಾರ್‌ರವರು ಚಿತ್ರಗಳನ್ನು ಬರೆದುಕೊಟ್ಟರು.

ಯುನೆಸ್ಕೊ ಸಂಸ್ಥೆಯ ಆ ಪ್ರಾಯೋಗಿಕ ಶಿಬಿರ ವಿಸರ್ಜನೆಯಾಯಿತು. ಆ ನಾಲ್ಕು ಗ್ರಂಥಗಳು ಮೂಲೆ ಪಾಲಾದವು. ಇಂದು ನಮ್ಮ ಜಿಲ್ಲೆಯಲ್ಲಿ ಸಾಕ್ಷರತಾ ಪ್ರಸಾರದ ಸಾರ್ವತ್ರಿಕ ಚಳವಳಿ, ತರಬೇತಿಗಳು ನಡೆದ ಹೊತ್ತಿನಲ್ಲಿ ಅದೇ ಪುಸ್ತಕಗಳನ್ನು ತಿರುಗಿ ಪ್ರಕಟಿಸುವ ಅಪೇಕ್ಷೆಯಲ್ಲಿ ಪ್ರಕಟಿಸಿರುತ್ತಾರೆ. ವಯಸ್ಕರ ಶಿಕ್ಷಣವಾಗಲಿ, ಸಾಕ್ಷರತೆಯಾಗಲಿ ಉಳಿದು ದೀರ್ಘಕಾಲ ಪ್ರಯೋಜನ ಕೊಡಬೇಕಾದರೆ ಓದು ಕಲಿತವರು ಮುಂದೆಯೂ ಓದುವ ಪರಿಪಾಠ ಉಳಿಸಿಕೊಂಡರೆ ಸರಿ, ಇಲ್ಲವಾದರೆ ಕಲಿತದ್ದು ಮರವೆಯಾಗುತ್ತದೆ, ವ್ಯರ್ಥವಾಗುತ್ತದೆ.

ಹಾಗಾಗದಿರಲು ಹೊಸತಾಗಿ ಓದು ಬರಹ ಕಲಿತವರ ಅಭಿರುಚಿ ಉಳಿಸಲು ಮೇಲೆ ಹೇಳಿದ ನಾಲ್ಕು ಬರಹಗಳು ನೆರವಾಗುವಲ್ಲಿ ನನಗೆ ವಿಶೇಷ ಸಂತೋಷವೇ ಸರಿ. ಇವುಗಳ ಪ್ರಕಾಶಕರು -ನನ್ನ ಮತ್ತು ಯುನೆಸ್ಕೊ ಸಂಸ್ಥೆಯ ಉದ್ದೇಶವನ್ನು ಮುಂದುವರಿಸಿದಂತಾದೀತು. ಚಿತ್ರಗಾರ ಹೆಬ್ಬಾರರಿಗೂ ಆದರಿಂದ ಸಂತೋಷವಾದೀತು.

ಇತೀ,

12.12.1990
ಸಾಲಿಗ್ರಾಮ

ಶಿವರಾಮ ಕಾರಂತ

ಹುಟ್ಟು, ಸಾವು ಒಟ್ಟು ಒಟ್ಟು

ಒಂದು ಕತೆಯ ನಿಮಗೆ ಹೇಳುವೆ.
ಬಹಳ ದಿನದ ಮೊದಲು ನಡೆದ ಕತೆ ಇದು.
ಆದರೂ ಅದರ ಮಾತು ಈಗಲೂ ನಿಜ.



ಸತ್ತ ಕೂಸಿಗಾಗಿ ಗೌತಮಿ ಅತ್ತಳು

ಒಂದು ಊರಲ್ಲಿ ಗೌತಮಿ ಎಂಬ ಬಡವೆ.
ಆ ಬಡವೆಗೆ ಒಂದೇ ಒಂದು ಕೂಸು.
ಆ ಕೂಸಿನ ಮೇಲೆ ಅವಳಿಗೆ ಬಹಳ ಪ್ರೀತಿ.
ಒಂದು ದಿನ ಗೌತಮಿಯ ಕೂಸು ಸತ್ತಿತು.
ಕೂಸು ಸತ್ತಿತು ಎಂದು ತಾಯಿ ಅತ್ತಳು.
ಸತ್ತ ಕೂಸಿಗಾಗಿ ಗೌತಮಿ ಅತ್ತೇ ಅತ್ತಳು.
ಎಲ್ಲ ಕೆಲಸ ಮರೆತು, ಅತ್ತೇ ಅತ್ತಳು.
ಆದರೆ ಅತ್ತರೆ ಸತ್ತವರು ಬರುವರೇ!




ಅವಳ ಅಳು ಕೇಳಿ ಒಬ್ಬ ಭಿಕ್ಷು ಬಂದ

ಅವಳ ಅಳು ಕೇಳಿ ಒಬ್ಬ ಭಿಕ್ಷು ಬಂದ.
ಅವಳನ್ನು 'ಏಕೆ ಅಳುವೆ?' ಎಂದು ಕೇಳಿದ.
ಅವಳು ಅಳುತ್ತ ಅಳುತ್ತ ನುಡಿದಳು-
'ನನ್ನ ಪ್ರೀತಿಯ ಕೂಸು ಸತ್ತಿದೆ;
ಅದಕ್ಕೆ ಜೀವ ಕೊಡಿಸು.'
'ಸತ್ತವರಿಗೆ ಜೀವ ಕೊಡುವುದೇ?' ಎಂದ
ಭಿಕ್ಷು.
'ನನಗೆ ನನ್ನ ಕೂಸು ಬೇಡವೇ?' ಎಂದಳು
ಗೌತಮಿ.



'ನನಗೆ ಗುರು ಇರುವ; ಆವನ ಬಳಿಗೆ ಹೋಗುವ' ಎಂದ ಭಿಕ್ಷು

ಅವಳ ಅಳು ಕಂಡು ಭಿಕ್ಷುವಿಗೂ ಚಿಂತೆ.
ಅಳುವ ಅವಳ ಕಂಡು ಅವನು ಚಿಂತಿಸಿ
ಹೇಳಿದ:
'ತಾಯಿ, ನಿನ್ನ ಚಿಂತೆ ಕಂಡು ನನಗೂ
ಚಿಂತೆಯೆ.
ಆದರೆ ನಾನು ಸತ್ತವರಿಗೆ ಜೀವ ಕೊಡಲಾರೆ.
ನನಗೆ ಗುರು ಇರುವ.
ಅವನು ದೊಡ್ಡವ; ತಿಳಿದವ.
ಅವನ ಬಳಿಗೆ ಹೋಗುವ' ಎಂದ.
'ಅವನು ಜೀವ ಕೊಡುವನೇ?' ಎಂದಳು
ಅವಳು.
'ಕೊಡಲೂ ಬಹುದು' ಎಂದ ಭಿಕ್ಷು.



ಬುದ್ಧ ಅವಳನ್ನು ನೋಡಿದ; ಸತ್ತ ಕೂಸನ್ನೂ ನೋಡಿದ

ಅವರು ಗುರುವಿನ ಬಳಿಗೆ ಹೋದರು.
ಆ ಗುರು ಯಾರು? ಅವನ ಹೆಸರು
ಗೌತಮ ಬುದ್ಧ.
ಗೌತಮಿಯ ಕೈಯಲಿ ಸತ್ತ ಕೂಸು ಇತ್ತು.
ಬುದ್ಧ ಅಳುವ ಅವಳನ್ನು ನೋಡಿದ.
ಸತ್ತ ಕೂಸನ್ನೂ ನೋಡಿದ.
'ಯಾರು ಇವಳು?' ಎಂದು ಕೇಳಿದ.
'ಅವಳೇ? ಬಡ ತಾಯಿ;
ಸತ್ತ ಕೂಸಿಗಾಗಿ ಅಳುವ ತಾಯಿ' ಎಂದ
ಭಿಕ್ಷು.



ಬುದ್ಧ ಆವಳನ್ನು 'ಏನು ಬೇಕು?' ಎಂದು ಕೇಳಿದ

ಬುದ್ಧ ಅವಳನ್ನು ಕಂಡು
'ತಂಗಿ, ನಿನಗೆ ಏನು ಬೇಕು?' ಎಂದು
ಕೇಳಿದ.
ಅವಳು ಅದಕ್ಕೆ ಹೀಗೆ ಎಂದಳು:
'ಇದು ನನ್ನ ಒಂದೇ ಕೂಸು;
ನನ್ನ ಪ್ರೀತಿಯ ಕೂಸು.
ಅದು ಸತ್ತ ಮೇಲೆ ನಾನು ಹೇಗೆ ಇರಲಿ!
ಅದಕ್ಕೆ ಜೀವ ಕೊಡಿಸಲಾರೆಯ?' ಎಂದು
ಬೇಡಿದಳು.



'ಅದಕ್ಕೆ ಜೀವ ಕೊಡಿಸ ಬೇಕೇ?'

ಬುದ್ಧ ಅವಳ ಮಾತು ಕೇಳಿ, ಪ್ರೀತಿಯಿಂದ
ಹೇಳಿದ:
'ಅದಕ್ಕೆ ಜೀವ ಕೊಡಿಸ ಬೇಕೇ?
ಜೀವ ಕೊಡಿಸಲು ಒಂದು ಮದ್ದು
ಹೇಳುವೆ.
ಆ ಮದ್ದು ತರುವೆಯ?'
'ಏನು ಮದ್ದು ಹೇಳಿ.
ಬೇಗ ಹೇಳಿ; ಹೋಗಿ ತರುವೆ.
ಈಗಲೇ ಹೋಗಿ ತರುವೆ' ಎಂದಳು.



‘ಸಾವು ಕಾಣದ ಮನೆಯ ಸಾಸಿವೆಯ ತಾ’ ಎಂದ ಬುದ್ಧ

'ಅದಕ್ಕೆ ಒಂದೇ ಒಂದು ಮದ್ದು ಇದೆ.
ಆ ಮದ್ದು ತಂದರೆ, ಜೀವ ಕೊಡುವೆ'
ಎಂದ ಬುದ್ಧ.
'ಏನು ಮದ್ದು? ಏನು ಮದ್ದು?' ಎಂದು
ಕೇಳಿದಳು ಗೌತಮಿ.
'ಸಾಸಿವೆಯ ಕಾಳು ತಾ' ಎಂದ ಬುದ್ಧ.
'ಬರಿಯ ಸಾಸಿವೆಯ ಕಾಳೇ?' ಎಂದಳು
ಅವಳು.
'ಬರಿಯ ಸಾಸಿವೆಯ ಕಾಳು.
ಸಾವು ಕಾಣದ ಮನೆಯ ಸಾಸಿವೆಯ
ಕಾಳು' ಎಂದ ಬುದ್ಧ.
'ಈಗಲೇ ಅದನು ಬೇಡಿ ತರುವೆ' ಎಂದು
ಅವಳು ಹೋದಳು.



‘ಸಾವಿಲ್ಲದ ಮನೆಯ ಸಾಸಿವೆ ಇದೆಯೇ!’ ಎಂದು ಕೇಳಿದಳು

ಸಾಸಿವೆಯ ಕಾಳು ಹುಡುಕಿ, ಗೌತಮಿ
ಹೋದಳು.
ಊರು ಊರು ಅಲೆದಳು; ಮನೆ ಮನೆಗೆ
ಹೋದಳು.
'ಸಾಸಿವೆಯ ಕಾಳು ಇದೆಯೇ?' ಎಂದು
ಕೇಳಿದಳು.
'ಇದೆ' ಎಂದರು ಜನ.
'ಕೊಡುವಿರಾ?' ಎಂದು ಕೇಳಿದಳು.
'ಆಗಲಿ' ಎಂದರು ಜನ.
'ಸಾವಿಲ್ಲದ ಮನೆಯೇ?' ಎಂದು
ಕೇಳಿದಳು!
ಆಗ 'ಅಲ್ಲ,' 'ಅಲ್ಲ' ಎಂದರು ಎಲ್ಲ.
ಸಾವು ಇಲ್ಲದ ಮನೆ ಒಂದೂ ಇರಲಿಲ್ಲ.



ಹೀಗೆ–ಎಲ್ಲರ ಮನೆಯೂ ಸಾವು ಕಂಡ ಮನೆಯೇ

ಹೋದ ಹೋದ ಮನೆಯುವರದು ಒಂದು.
ಒಂದು ಕತೆ.
ಒಬ್ಬ ಎಂದ: 'ನನ್ನ ತಂದೆ ಸತ್ತಿಹ.'
ಇನ್ನೂ ಒಬ್ಬ ಎಂದ: 'ನನ್ನ ತಾಯಿ
ಸತ್ತಿಹಳು.'
ಒಬ್ಬಳು–ಗಂಡ ಸತ್ತ ಕತೆಯ ಹೇಳಿದಳು.
ಇನ್ನೊಬ್ಬಳು–ತಂಗಿ ಸತ್ತುದ ಹೇಳಿದಳು.
ಹೀಗೆ–ಎಲ್ಲರ ಮನೆಯೂ ಸಾವು ಕಂಡ
ಮನೆಯೇ.
ಸಾವು ಕಾಣದ ಮನೆ ಎಂಬುದೇ ಇರಲಿಲ್ಲ.




ಗೌತಮಿ ಹುಡುಕಿ. ದಣಿದು ಬುದ್ಧನ ಬಳಿಗೆ ಬಂದಳು

ಗೌತಮಿ ಹುಡುಕಿ, ದಣಿದು, ಬುದ್ಧನ
ಬಳಿಗೆ ಬಂದಳು.
ಬರಿಯ ಕೈಯಲಿ ಬಂದಳು.
'ಸಾಸಿವೆಯ ಕಾಳು ಸಿಗಲಿಲ್ಲ' ಎಂದಳು.
'ಸಾಸಿವೆಯ ಕಾಳು ಇಲ್ಲವೇ?' ಎಂದ
ಬುದ್ಧ.
'ಸಾಸಿವೆಯ ಕಾಳಿದೆ; ಎಲ್ಲರಲ್ಲೂ ಇದೆ.'
'ಇನ್ನೇನು?'
'ಸಾವಿಲ್ಲದ ಮನೆ ಎಲ್ಲೂ ಇಲ್ಲ, ತಂದೆ'
ಎಂದಳು.
'ಎಲ್ಲರ ಮನೆಯಲ್ಲೂ ಸಾವೇ?'
'ಸಾವಿಲ್ಲದ ಮನೆಯೇ ಇಲ್ಲ.'
'ಹಾಗೆ ಇರಲು, ನಿನ್ನ ಮನೆಗೆ ಸಾವು
ಬಂದುದು ಹೆಚ್ಚೇ?
ಕೂಸು ಸತ್ತುದು ಏನು ಹೆಚ್ಚು?
ಯೋಚಿಸು' ಎಂದ ಬುದ್ಧ.



'ನನ್ನ ಕೂಸಿಗೆ ಸಾವು ಬಂದುದು ಹೆಚ್ಚೇ?' ಎಂದ ಬುದ್ಧ

‘ನಿನ್ನ ಕೂಸಿಗೆ ಸಾವು ಬಂದುದು ಹೆಚ್ಚೇ?’
ಎಂದ ಬುದ್ಧ.
‘ನನ್ನ ಕೂಸು ಸತ್ತುದು ಏನು ಹೆಚ್ಚು’
ಎಂದು ಗೌತಮಿ ಯೋಚಿಸಲೇ
ಬೇಕಾಯಿತು!
ಅದನ್ನೆ ಅದನ್ನೆ ತಿರುಗಿ ತಿರುಗಿ
ಯೋಚಿಸಿದಳು! ಬುದ್ಧಿ ಬಂದಿತು.
‘ಇಷ್ಟು ತಿಳಿಯದೆ ಹೋದೆನೇ, ನಾನು!
ಸತ್ತವರಿಗಾಗಿ ಬರಿದೆ ಅತ್ತೆನೇ?
ಎಲ್ಲರಿಗೂ ಸಾವು ಇದೆ—ಎಂದು ತಿಳಿಯದೆ
ಹೋದೆನೇ?’ ಎಂದುಕೊಂಡಳು.



ತಿಳಿವಿನಿಂದ ಶಾಂತಿ

ಬುದ್ಧ ಪ್ರೀತಿಯಿಂದ ಆವಳಿಗೆ ಹೇಳಿದ:
'ತಂಗಿ, ಹುಟ್ಟಿದವರಿಗೆ ಸಾವು ಇದೆ.
ಹುಟ್ಟಿದವರು ಸಾಯಲೇ ಬೇಕು.
ಹುಟ್ಟು, ಸಾವು ಒಟ್ಟು ಒಟ್ಟು!
ಯಾವುದು ತಪ್ಪದೋ, ಅದಕ್ಕಾಗಿ
ಅಳಬಾರದು.
ಅತ್ತುದರಿಂದ ಸತ್ತವರು ಬರಲಾರರು!'
ಬುದ್ಧನ ಮಾತು ಕೇಳಿ ಆವಳಿಗೆ ತಿಳಿವು
ಬಂದಿತು.

ತಿಳಿವಿನಿಂದ ಶಾಂತಿ ಬಂದಿತು.
ಆವಳ ದು:ಖ ಹೋಯಿತು.

ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ

1. ಗೌತಮಿಯು ಯಾಕೆ ಅತ್ತಳು?

2. "ಅತ್ತರೆ ಸತ್ತವರು ಬರುವರೇ?" ಈ ಮಾತು ನಿಜವೇ?
   ಹಾಗಾದರೆ, ಗೌತಮಿಯು ಯಾಕೆ ಅತ್ತಳು?

3. ಭಿಕ್ಷುವು ಗೌತಮಿಗೆ ಏನು ಹೇಳಿದ?
   ಅವಳು ಏನು ಉತ್ತರ ಹೇಳಿದಳು?

4. ಆ ಗುರು ಯಾರು?
   ಅವನು ಗೌತಮಿಗೆ ಯಾವ ಮದ್ದು ಹೇಳಿದ?

5. ಗೌತಮಿಗೆ ಮದ್ದು ದೊರಕಿತೇ? ಯಾಕೆ?

6. ಗೌತಮಿಯು ಬರಿಯ ಕೈಯಲಿ ಬರಲು,
   ಬುದ್ಧ ಅವಳಿಗೆ ಏನು ಹೇಳಿದ?

7. ಗೌತಮಿಯು ಯಾವ ನಿಜದ ಮಾತು ಕಂಡಳು?

8. "ಹುಟ್ಟು, ಸಾವು ಒಟ್ಟು ಒಟ್ಟು" ಚರ್ಚಿಸಿ.

9. "ಕತೆಯ ಮಾತು ಈಗಲೂ ನಿಜ,"
   ನಿಮ್ಮ ಅಭಿಪ್ರಾಯವೇನು? ಚರ್ಚಿಸಿ.

ಬ) ಕೆಳಗಿನ ಒಂದೊಂದು ಪದವನ್ನು ಸೇರಿಸಿ ಒಂದೊಂದು ವಾಕ್ಯವನ್ನು ರಚಿಸಿರಿ.

ಕೂಸು; ಅತ್ತಳು; ಮದ್ದು; ಶಾಂತಿ; ದುಃಖ; ಯೋಚಿಸು; ಕರುಣೆಯಿಂದ;
ಅಲೆದಳು; ಇಷ್ಟು; ಜೀವ; ಒಟ್ಟು;

ಒಟ್ಟು

ಸಂಪೂರ್ಣ ಸಾಕ್ಷರತಾ ಆಂದೋಲನ.



1990-91

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್